# ಕರ್ನಾಟಕ ಸರ್ಕಾರದ ನಡವಳಿ

ವಿಷಯ:- ಭಾರತದ ಸರ್ವೋಚ್ಚ ನ್ಯಾಯಾಲಯವು ದಿನಾಂಕ 9.5.2005ರಂದು ರಿಟ್ ಪಿಟಿಷನ್ ಸಂಖ್ಯೆ: 196/2001ರಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಪರಿಹರಿಸುವ ವಿಷಯಕ್ಕೆ ಸಂಬಂಧಿಸಿದಂತೆ ಮುಖ್ಯವಾಗಿ ಸರ್ಕಾರದ ಆಹಾರ ಭದ್ರತೆ ಯೋಜನೆಗಳಾದ ಸಾರ್ವಜನಿಕ ವಿತರಣಾ ಪದ್ಧತಿ, ಪಿ.ಸಿ.ಡಿ.ಎಸ್., ಕೂಲಿಗಾಗಿ ಕಾಳು, ಮಧ್ಯಾಹ್ನದ ಊಟದ ಯೋಜನೆ, ಇತ್ಯಾದಿಗಳಿಗೆ ಸಂಬಂಧಿಸಿದಂತೆ ಹೊರಡಿಸಿದ ಆದೇಶದ ಹಿನ್ನೆಲೆಯಲ್ಲಿ ಸೂಚನೆಗಳು.

ಪ್ರಸ್ತಾವನೆ:-

ಮೇಲ್ಕಾಣಿಸಿದ ಆದೇಶದಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯವು ನೇಮಿಸಿರುವ ಆಯುಕ್ತರುಗಳು ಆಗಸ್ಟ್ 2004ರಲ್ಲಿ ಸಲ್ಲಿಸಿದ 5ನೇ ವರದಿಯಲ್ಲಿರುವ ಈ ಕೆಳಕಂಡ ಶಿಫಾರಸ್ಸುಗಳನ್ನು ಗಮನಿಸಿದೆ.

"ಶಿಫಾರಸ್ಸಿನಂತೆ ಮುಖ್ಯ ಕಾರ್ಯದರ್ಶಿಯವರು ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲು ಹಿಂಜರಿಯುವ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸುವ ಸಲುವಾಗಿ ಒಂದು ನಿರ್ದಿಷ್ಟ ವ್ಯವಸ್ಥೆಯನ್ನು ರೂಪಿಸುವುದು; ರಾಜ್ಯ ಸರ್ಕಾರವು ಸಾರ್ವಜನಿಕರಿಂದ ಸ್ವೀಕೃತಿಯಾದಂತಹ ವಿವಿಧ ರೀತಿಯ ದೂರುಗಳನ್ನು ಹಾಗೂ ಕುಂದುಕೊರತೆಗಳನ್ನು ಕ್ರಮಬದ್ಧವಾಗಿ ಮತ್ತು ಕಾಲಬದ್ಧವಾಗಿ ವಿಲೇವಾರಿ ಮಾಡಲು ವಿವರವಾದ ವಿಧಿವಿಧಾನವನ್ನು ರೂಪಿಸುವ ಸಲುವಾಗಿ ಸಮಿತಿಗಳನ್ನು ರಚಿಸುವುದು; ಕುಂದುಕೊರತೆಗಳನ್ನು ಆಲಿಸಿ ಕಾಲಮಿತಿಯೊಳಗೆ ಅವುಗಳಿಗೆ ಪರಿಹಾರವನ್ನು ಒದಗಿಸುವ ಸಲುವಾಗಿ ಒಂದು ಸ್ವತಂತ್ರ ಲೋಕಸೇವಾ ಆಯೋಗವನ್ನು ರಚಿಸುವುದು ಮತ್ತು ಈ ಆಯೋಗವು ತನಗೆ ವಹಿಸಲ್ಪಟ್ಟ ಕಾರ್ಯವನ್ನು ನಿರ್ವಹಿಸಲು ಮತ್ತು ನ್ಯಾಯಾಲಯಗಳು ಹೊರಡಿಸಿದ ಆದೇಶಗಳನ್ನು ಜಾರಿಗೊಳಿಸಲು ಅಗತ್ಯವಾದ ಅಧಿಕಾರವನ್ನು ನೀಡುವುದು ಮತ್ತು ಹಣಕಾಸನ್ನು ಒದಗಿಸುವುದು."

ಸರ್ವೋಚ್ಚ ನ್ಯಾಯಾಲಯವು ನೇಮಿಸಿರುವ ಆಯುಕ್ತರುಗಳ ಮೇಲ್ಕಾಣಿಸಿದ ಶಿಫಾರಸ್ಸುಗಳನ್ನು ಕಾರ್ಯದರ್ಶಿಗಳ ಸಮಿತಿಯ ಸಭೆಯಲ್ಲಿ ಚರ್ಚಿಸಲಾಯಿತು. ಜಿಲ್ಲಾಮಟ್ಟದಲ್ಲಿ ಸ್ವೀಕೃತಿಯಾದಂತಹ ಕುಂದುಕೊರತೆಗಳ ವಿವಿಧ ರೀತಿಯ ದೂರುಗಳನ್ನು ವಿಲೇವಾರಿ ಮಾಡುವ ಸಲುವಾಗಿ ಸಮಿತಿಗಳನ್ನು ರಚಿಸಲು ಕೂಡಲೇ ನಿರ್ದೇಶನಗಳನ್ನು ನೀಡುವಂತೆ ತೀರ್ಮಾನಿಸಲಾಯಿತು.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 59 ಯೋಮುಸಾ 2005

ಬೆಂಗಳೂರು, ದಿನಾಂಕ 4ನೇ ಜೂನ್, 2005.

1. ಜಿಲ್ಲಾಧಿಕಾರಿಗಳು ಈಗಾಗಲೇ ಜಿಲ್ಲೆಗಳಲ್ಲಿ ಸಾರ್ವಜನಿಕ ಕುಂದುಕೊರತೆಗಳನ್ನು ಪರಿಹರಿಸುವ ಅಧಿಕಾರಿಗಳಾಗಿದ್ದಾರೆ ಹಾಗೂ ಉಪ ವಿಭಾಗದ ಮಟ್ಟದಲ್ಲಿ ಉಪ ವಿಭಾಗಾಧಿಕಾರಿಗಳು ಮತ್ತು ತಾಲ್ಲೂಕು ಮಟ್ಟದಲ್ಲಿ ತಹಸಿಲ್ದಾರರು ಕುಂದುಕೊರತೆಗಳನ್ನು ಪರಿಹರಿಸುವ ಅಧಿಕಾರಿಗಳಾಗಿದ್ದಾರೆ. ಪಂಚಾಯತ್ ರಾಜ್ ಸಂಸ್ಥೆಗಳ ಮಟ್ಟದಲ್ಲೂ ಅವರ ಪರಿಮಿತಿಯಲ್ಲಿರುವ ವಿಷಯಗಳಿಗೆ ಸಂಬಂಧಿಸಿದಂತೆ ಈ ವ್ಯವಸ್ಥೆಯು ಲಭ್ಯವಿದೆ. ಹಾಲಿ ಜಾರಿಯಲ್ಲಿರುವ ವ್ಯವಸ್ಥೆಗೆ ಯಾವುದೇ ರೀತಿಯ ಧಕ್ಕೆಯನ್ನುಂಟುಮಾಡದೆ ಮುಖ್ಯವಾಗಿ ಸರ್ಕಾರದ ಆಹಾರ ಭದ್ರತೆ ಯೋಜನೆ ಹಾಗೂ ಅದಕ್ಕೆ ಸಂಬಂಧಿಸಿದ ಎಲ್ಲಾ ವಿಚಾರಗಳ ಕುಂದುಕೊರತೆಗಳನ್ನು ಪರಿಹರಿಸಲು ಜಿಲ್ಲಾ ಮಟ್ಟದಲ್ಲಿ ಇನ್ನೊಂದು ಅಧಿಕ ಕುಂದುಕೊರತೆಗಳ ಪರಿಹಾರ ಪದ್ಧತಿಯನ್ನು ರಚಿಸಲು ನಿರ್ಧರಿಸಲಾಗಿದೆ.

2. ಜಿಲ್ಲೆಯ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನೊಳಗೊಂಡ ಮೂರು ಜನ ಸದಸ್ಯರ ಸಮಿತಿಯೊಂದು ಪ್ರತೀ ತಿಂಗಳ ಒಂದನೇ ಮತ್ತು ಮೂರನೇ ಶನಿವಾರಗಳಂದು ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸುವುದು. ಮೊದಲನೇ ಅಥವಾ ಮೂರನೇ ಶನಿವಾರಗಳು ಸಾರ್ವಜನಿಕ ರಜಾದಿನಗಳಾಗಿದ್ದಲ್ಲಿ ಈ ಸಭೆಯನ್ನು ಅವುಗಳ ಮುಂಚಿನ ಕೆಲಸದ ದಿನಗಳಂದು ಏರ್ಪಡಿಸುವುದು. ಯಾವುದೇ ಸಂದರ್ಭಗಳಲ್ಲಿ ಈ ಸಭೆಗಳ ದಿನಾಂಕಗಳನ್ನು ಬದಲಾಯಿಸಬಾರದು. ಈ ಸಭೆಗೆ ಸದಸ್ಯರ ಹಾಜರಾತಿಯು ಕಡ್ಡಾಯವಾಗಿದ್ದು, ಸರ್ವೋಚ್ಚ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಈ ಸಭೆಗೆ ಇತರ ಯಾವುದೇ ಸಭೆ/ಕಛೇರಿ ಕೆಲಸಗಳಿಗಿಂತ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡತಕ್ಕದ್ದು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಿಂಗಳಿನಲ್ಲಿ ನಡೆಯುವ ಎರಡು ಸಭೆಗಳಲ್ಲಿ ಕನಿಷ್ಠ ಒಂದು ಸಭೆಗಾದರೂ ಹಾಜರಾಗಲೇ ಬೇಕು. ಅನಿವಾರ್ಯ ಕಾರಣಗಳಿಂದಾಗಿ, ಉದಾಹರಣೆಗೆ ಅನಾರೋಗ್ಯದಿಂದಾಗಿ, ಯಾವುದೇ ಒಬ್ಬ ಸದಸ್ಯರು ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದಲ್ಲಿ, ಇತರ ಸದಸ್ಯರೇ ಈ ಸಭೆಯನ್ನು ನಡೆಸತಕ್ಕದ್ದು. ಸಭೆಯನ್ನು ನಿರ್ದಿಷ್ಟವಾಗಿ ಬೆಳಗ್ಗೆ 10.00 ಘಂಟೆಗೆ ಪ್ರಾರಂಭಿಸಿ, ಅಗತ್ಯವಿದ್ದಲ್ಲಿ ಮಧ್ಯಾಹ್ನ [illegible] ನಿಮಿಷಗಳ ಊಟದ ವಿರಾಮದ ನಂತರವೂ ಮುಂದುವರಿಸಿ, ಸ್ವೀಕೃತಿಯಾದಂತಹ ಎಲ್ಲಾ ದೂರುಗಳನ್ನು ಚರ್ಚಿಸಿ ನಿರ್ಧಾರ ಕೈಗೊಳ್ಳತಕ್ಕದ್ದು.

ಮುಂದುವರಿದಿದೆ - - - 2

3. ಈ ಸಮಿತಿಗಳು ತಮ್ಮದೇ ಆದ ಕಾರ್ಯವಿಧಾನವನ್ನು ರೂಪಿಸಿಕೊಳ್ಳಬಹುದಾಗಿದೆ. ಆದರೆ ಶನಿವಾರದ ಕಛೇರಿ ವೇಳೆಯ ಅಂತ್ಯದವರೆಗೆ ಸ್ವೀಕೃತಿಯಾದ ಎಲ್ಲಾ ಕುಂದುಕೊರತೆಗಳ ಫಿರ್ಯಾದಿಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದು. ಯಾವುದೇ ಸಂದರ್ಭದಲ್ಲಿ ವಕೀಲರುಗಳಿಗೆ ಫಿರ್ಯಾದಿದಾರರ ಪರವಾಗಿ ಹಾಜರಾಗಲು ಅವಕಾಶನೀಡತಕ್ಕದ್ದಲ್ಲ ಆದರೆ ವಕೀಲರುಗಳು ಫಿರ್ಯಾದಿದಾರರಾಗಿದ್ದಲ್ಲಿ ಮಾತ್ರ ಹಾಜರಾಗಬಹುದು. ಫಿರ್ಯಾದಿದಾರರು ಅವಶ್ಯಕವಾಗಿ ಹಾಜರಾಗಿರಲೇ ಬೇಕಾಗಿಲ್ಲ ಆದರೆ ದೂರಿಗೆ ಸಂಬಂಧಿಸಿದ ಅಗತ್ಯ ಮಾಹಿತಿಯೊಂದಿಗೆ ಸಂಬಂಧಪಟ್ಟ ಅಧಿಕಾರಿಯು ಹಾಜರಿರತಕ್ಕದ್ದು. ಸಮಿತಿಯು ಸ್ಥಳದಲ್ಲಿಯೇ ನಿರ್ಧಾರವನ್ನು ತೆಗೆದುಕೊಳ್ಳುವುದು ಮತ್ತು ದೂರಿಗೆ ಸಂಬಂಧಿಸಿದಂತೆ ನಿರ್ಧಾರವನ್ನು ಜಾರಿಗೊಳಿಸಲು ಅಧಿಕಾರಿ/ಅಧಿಕಾರಿಗಳ ಹೆಸರುಗಳನ್ನು ನಮೂದಿಸತಕ್ಕದ್ದು. ಯಾವುದೇ ಪ್ರಕರಣವನ್ನು ಮುಂದೂಡುವಂತಿಲ್ಲ ಮತ್ತು ಸಾಧ್ಯವಾದಷ್ಟು ಮಟ್ಟಿಗೆ ಮಧ್ಯಾಂತರ ಪರಿಹಾರವನ್ನು ಒದಗಿಸತಕ್ಕದ್ದು. ಕೈಗೊಂಡ ನಿರ್ಧಾರಗಳನ್ನು ದಾಖಲಿಸತಕ್ಕದ್ದು, ಅವುಗಳನ್ನು ಸೂಚನಾ ಫಲಕಗಳಲ್ಲಿ ಪ್ರದರ್ಶಿಸತಕ್ಕದ್ದು ಮತ್ತು ವೆಬ್‌ಸೈಟ್‌ನಲ್ಲಿ ಬಿತ್ತರಿಸುವ ಜೊತೆಗೆ ಫಿರ್ಯಾದಿದಾರರಿಗೆ ತಿಳಿಸತಕ್ಕದ್ದು. ಈ ಕೆಳಕಂಡ ಅಂಶಗಳ ಬಗ್ಗೆ ಸಂಕ್ಷಿಪ್ತ ವಿವರಗಳನ್ನೊಳಗೊಂಡ ವರದಿಯೊಂದನ್ನು ಸಭೆಯ ನಂತರದ ಸೋಮವಾರದಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಸಾರ್ವಜನಿಕ ಕುಂದುಕೊರತೆಗಳ ವಿಭಾಗ, 20ನೇ ಮಹಡಿ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಡಾ: ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು.560 001, ಅವರಿಗೆ ಕಳುಹಿಸಿಕೊಡುವುದು:- (ಅ) ಸ್ವೀಕೃತಿಯಾದ ಅಥವಾ ಗಣನೆಗೆ ತೆಗೆದುಕೊಂಡ ಅರ್ಜಿಗಳ ಸಂಖ್ಯೆ, (ಆ) ಪರಿಹಾರ ಒದಗಿಸಲಾದ ಅರ್ಜಿಗಳ ಸಂಖ್ಯೆ, (ಇ) ತಿರಸ್ಕರಿಸಲ್ಪಟ್ಟ ಅರ್ಜಿಗಳ ಸಂಖ್ಯೆ ಹಾಗೂ (ಈ) ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ. ಮುಂದಿನ ಸಭೆಯವರೆಗೆ ಅನುಸರಣಾ ವರದಿಯನ್ನು ಸಲ್ಲಿಸಲು ಸಂಬಂಧಿಸಿದ ಅಧಿಕಾರಿ/ಅಧಿಕಾರಿಗಳಿಗೆ ಸಮಯಾವಕಾಶವಿರುತ್ತದೆ.

4. ಆಹಾರ ಭದ್ರತೆ ಪದ್ಧತಿಗೆ ಸಂಬಂಧಿಸಿದ ಕುಂದುಕೊರತೆಗಳನ್ನು ಇತರ ಸಾಮಾನ್ಯ ಕುಂದುಕೊರತೆಗಳ ಪರಿಹಾರ ವ್ಯವಸ್ಥೆಯಡಿಯಲ್ಲಿಯೇ ಮುಂದುವರಿಸುವುದು ಆದರೆ ಇಂತಹ ಕುಂದುಕೊರತೆಗಳಿಗೆ ಸಂಬಂಧಿಸಿದ ಅರ್ಜಿಯು ಸಮಿತಿಯ ಮುಂದೆ ವಿಚಾರಣೆಗೆ ಬಂದಲ್ಲಿ ಸಮಿತಿಯೇ ಆ ಬಗ್ಗೆ ವ್ಯವಹರಿಸಿ ಪರಿಹಾರವನ್ನು ಸೂಚಿಸುವುದು. ಸಮಿತಿಯು ಪರಿಹಾರ ಒದಗಿಸುವ ಸಲುವಾಗಿ ಇತರ ಯಾವುದೇ ಪ್ರಾಧಿಕಾರಕ್ಕೆ ಇಂತಹ ಅರ್ಜಿಯನ್ನು ವರ್ಗಾಯಿಸುವಂತಿಲ್ಲ.

5. ಸಮಿತಿಯು ಮುಂದಿನ ಸಭೆಯಲ್ಲಿ ಅನುಸರಣಾ ವರದಿಯ ಪುನರಾವಲೋಕನೆಯ ನಂತರ ಪ್ರಥಮವಾಗಿ ಅನುಸರಣಾ ವರದಿಗಳನ್ನು, ಸಲ್ಲಿಸದಿರುವ ಪ್ರಕರಣಗಳ ಬಗ್ಗೆ ಚರ್ಚಿಸುವುದು. ನಿರ್ಧಾರವನ್ನು ಜಾರಿಗೊಳಿಸಲು ವಿಳಂಬಮಾಡುವ ಅಥವಾ ನಿರ್ಧಾರ/ನಿರ್ಧಾರಗಳನ್ನು ಜಾರಿಗೊಳಿಸದಿರುವವರ ವಿರುದ್ಧ ಕ್ರಮ ಜರುಗಿಸಲು ಸಮಿತಿಗೆ ಅಧಿಕಾರವನ್ನು ನೀಡಲಾಗಿದೆ. ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲು ಹಿಂಜರಿಯುವಂತಹ ಸಿಬ್ಬಂದಿಗಳ ವಿರುದ್ಧ ಕ್ರಮ ಜರುಗಿಸಲು ಕೂಡಾ ಸಮಿತಿಗೆ ಅಧಿಕಾರವನ್ನು ನೀಡಲಾಗಿದೆ. ಇಂತಹ ಪ್ರಕರಣಗಳಲ್ಲಿ ಶಿಸ್ತುಕ್ರಮ ಜರುಗಿಸುವ ಸಲುವಾಗಿ ವರದಿಗಳನ್ನು ಸಂಬಂಧಪಟ್ಟ ಶಿಸ್ತು ಪ್ರಾಧಿಕಾರಿಗಳಿಗೆ ಕಳುಹಿಸಿಕೊಡುವುದು.

6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು ಈ ಸಾರ್ವಜನಿಕ ಕುಂದುಕೊರತೆಗಳನ್ನು ಪರಿಹರಿಸುವ ಪದ್ಧತಿಯ ಸಮನ್ವಯ ಹಾಗೂ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವರು.

ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಕೆ. ಮಿಶ್ರ

[ಕೆ. ಕೆ. ಮಿಶ್ರ]
ಮುಖ್ಯ ಕಾರ್ಯದರ್ಶಿ
ಕರ್ನಾಟಕ ಸರ್ಕಾರ

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಅಭಿವೃದ್ಧಿ ಆಯುಕ್ತರು
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
3. ಎಲ್ಲಾ ಜಿಲ್ಲಾಧಿಕಾರಿಗಳು/ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು
4. ಎಲ್ಲಾ ಇಲಾಖಾ ಮುಖ್ಯಸ್ಥರುಗಳು
5. ಮಾನ್ಯ ಮುಖ್ಯ ಮಂತ್ರಿಗಳ/ಉಪ ಮುಖ್ಯ ಮಂತ್ರಿಗಳ/ಸಂಪುಟ ಸಚಿವರುಗಳ/ರಾಜ್ಯ ಸಚಿವರುಗಳ ಕಾರ್ಯದರ್ಶಿಗಳು/ಆಪ್ತ ಕಾರ್ಯದರ್ಶಿಗಳು.
6. ಸಂಕಲನಕಾರರು, ರಾಜ್ಯ ಪತ್ರ
7. ಶಾಖಾ ಕಡತ